ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1974

ಸದಸ್ಯರ ಹೆಸರು : ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 26-03-2020

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

***

	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯಲ್ಲಿ ಸೋಲಾರ್ ಪಾರ್ಕ್ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ ಸೌರ ಪಾರ್ಕ್ ನಿರ್ಮಾಣ ಮಾಡುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ. ಆದರೆ, ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿ 49 ಮೆ.ವ್ಯಾ ಸಾಮರ್ಥ್ಯದ ಒಂದು ಖಾಸಗಿ ಸೌರ ಪಾರ್ಕ್ ಅನ್ನು Sinchara Developers Pvt Ltd., ರವರಿಗೆ ಹಂಚಿಕೆ ಮಾಡಲಾಗಿದ್ದು, ಯೋಜನೆಯನ್ನು ತಮ್ಮ ಸ್ವಂತ ವೆಚ್ಚದಲ್ಲಿ ಅನುಷ್ಠಾನಗೊಳಿಸುವ ಜವಾಬ್ದಾರಿಯು ಅಭಿವೃದ್ಧಿದಾರರದ್ದೇ ಆಗಿದ್ದು, ಇದಕ್ಕೆ ಸರ್ಕಾರದಿಂದ ಯಾವುದೇ ಅನುದಾನ ಒದಗಿಸುವುದಿಲ್ಲ.
ಆ)	ಪ್ರಸ್ತುತ ರಾಯಚೂರು ಜಿಲ್ಲೆಯಿಂದ ಸೋಲಾರ್ ಯೋಜನೆ ಮುಖಾಂತರ ಉತ್ಪತ್ತಿಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು?	ರಾಯಚೂರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ವಿವಿಧ ವರ್ಗಗಳಡಿ 282.375 ಮೆ.ವ್ಯಾ ನಷ್ಟು ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಗಳು ಅನುಷ್ಠಾನಗೊಂಡಿದ್ದು, ಇದರಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಒಪ್ಪಂದ ಮಾಡಿಕೊಂಡಿರುವ ಸೌರ ಯೋಜನೆಗಳಿಂದ 2019-20ನೇ ಸಾಲಿನ ಜನವರಿ 2020ರ ಅಂತ್ಯಕ್ಕೆ ಖರೀದಿ ಮಾಡಿರುವ ವಿದ್ಯುತ್ ಪ್ರಮಾಣದ ವಿವರಗಳು ಕೆಳಕಂಡಂತಿವೆ:-

ಕ್ರ. ಸಂ.	ಕಂಪನಿ ಹೆಸರು	ಖರೀದಿ ಮಾಡಿರುವ ವಿದ್ಯುತ್ ಪ್ರಮಾಣ (ದ.ಲ.ಯೂ.ಗಳಲ್ಲಿ)
1	ಬೆಸ್ಕಾಂ	9.53
2	ಮೆಸ್ಕಾಂ	32.44
3	ಹೆಸ್ಕಾಂ	4.28
4	ಜೆಸ್ಕಾಂ	21.47
	ಒಟ್ಟು	**67.72**

ಸಂಖ್ಯೆ: ಎನರ್ಜಿ 89 ಇಬಿಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ